ಅವನ ಹಿನ್ನೆಲೆಯೂ ಕೂಡ ನಿಮಗೆಲ್ಲಾ ಗೊತ್ತಿದೆ. ಅದನ್ನೆಲ್ಲಾ ಬಹಳ ವಿವರವಾಗಿ ಇಲ್ಲಿ ಹೇಳುವಂತ ಅಗತ್ಯವಿಲ್ಲ. ಕೋರ್ಟ್ ಕಛೇರಿಗಳಲ್ಲಿ ವಿವಾದಿತ ಸ್ಥಳದ ಬಗ್ಗೆ ಪ್ರಕರಣದ ವಿಚಾರಣೆ ನಡೆಯುತ್ತಿರುವಂತಹ ಸಂದರ್ಭದಲ್ಲಿ ಅದರ ನಿರ್ಣಯ ಆಗುವವರೆಗೆ, ಡಿ.ಸಿ.ಯವರು ನಿರ್ಣಯವನ್ನು ಕೊಡುತ್ತೇನೆ ಅಲ್ಲಿಯವರೆಗೆ ಯಥಾಸ್ಥಿತಿ ಕಾಪಾಡಿಕೊಂಡು ಹೋಗಬೇಕು ಎಂದು ಸೂಚನೆ ಕೊಟ್ಟಂತಹ ಸಂದರ್ಭದಲ್ಲೂ ಸಹಿತ ಈ ಎಸ್ಪಿ ಬಂದ ಮೇಲೆ ಅಲ್ಲಿ ಗಲಾಟೆ ಮಾಡಲು ಪ್ರಚೋದನೆ ಕೊಟ್ಟು, ಒಂದು ಕೋಮಿನವರನ್ನು ಎಬ್ಬಿಸಿ ಇವತ್ತು ಅಲ್ಲಿ ಗೊಂದಲ ಆಗಲಿಕ್ಕೆ ಗಲಾಟೆ ಮಾಡಲಿಕ್ಕೆ ಕಾರಣೀಭೂತನಾಗಿದ್ದಾನೆ. ಈ ದಿಸೆಯಲ್ಲಿ ಎಸ್ಪಿ ನಿರ್ಲಕ್ಷ್ಯತನ ತೋರಿದ್ದಾರೆ. ಆ ವೈಫಲ್ಯದ ಆಧಾರದ ಮೇಲೆ ಆ ಎಸ್ಪಿಯನ್ನು ತಕ್ಷಣ ಸಸ್ಪೆಂಡ್ ಮಾಡಬೇಕು ಎಂದು ನಾನು ಒತ್ತಾಯ ಮಾಡುತ್ತಿದ್ದೇನೆ. ಮಾನ್ಯ ಗೃಹ ಸಚಿವರು ಈ ವಿಷಯದಲ್ಲಿ ರಾಜಕೀಯ ಬೆರೆಸಬಾರದು ಎನ್ನುವಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತಿದ್ದೇನೆ.

ಅಧ್ಯಕ್ಷರು : ಅಲ್ಲಿಯ ಪರಿಸ್ಥಿತಿ ಈಗ ಕಾಮ್ ಆಗಿದೆ, ಇಲ್ಲಿ ನಾವು ಕಾಮ್ ಆಗಿ ಇರೋಣ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಒಬ್ಬ ಸಚಿವರೂ ಅಲ್ಲಿಗೆ ಹೋಗಿಲ್ಲ, ಶಾಸಕರೂ ಹೋಗಿಲ್ಲ, ಜಿಲ್ಲಾ ಉಸ್ತುವಾರಿ ಮಂತ್ರಿಗಳೂ ಇಲ್ಲಿದ್ದಾರೆ. ಅಧಿಕಾರಿಗಳು ಕೊಟ್ಟ ರಿಪೋರ್ಟ್ ಮೇಲೆ ಇವರು ಸುಮ್ಮನೆ ಕೂತಿದ್ದಾರೆ. ಅಲ್ಲಿ ಏನು ನಡೆಯುತ್ತಿದೆ ಇವರಿಗೇ ಗೊತ್ತಿಲ್ಲ. ಅದು ಯಾವ ರಿಪೋರ್ಟ್ ಬರುತ್ತಿದೆ ಎಂದು ತಾವು ನೋಡಿ. ಎಸ್.ಪಿಯವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಎಸ್.ಪಿ.ಯ ಕರ್ತವ್ಯದಲ್ಲಿ ವೈಫಲ್ಯ ಆಗಿದೆ, ರಾಣೆಬೆನ್ನೂರಿನಲ್ಲಿ ಬೂದಿ ಮುಚ್ಚಿದ ಕೆಂಡದಂತಹ ಪರಿಸ್ಥಿತಿ ಉದ್ಭವವಾಗಿದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಬಹಳ ಗಂಭೀರವಾದ ವಿಷಯ. ನಾವು ರಚನಾತ್ಮಕವಾದ ಸಂದೇಶವನ್ನು ಕಳುಹಿಸಬೇಕಾಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್ : ಅಲ್ಲಿ ಪ್ರಕ್ಷುಬ್ಧವಾದ ವಾತಾವರಣ ಇದೆ, ಯಾರೂ ವಿಸಿಟ್ ಮಾಡುವುದಕ್ಕೆ ಹೋಗಲಿಲ್ಲ, ಎಸ್ಪಿಯವರು ಪರಿಸ್ಥಿತಿಯನ್ನು ನಿರ್ಲಕ್ಷ್ಯ ಮಾಡಿದ್ದರೂ ಸರ್ಕಾರದವರು ಮೌನವಹಿಸಿದ್ದಾರೆ. ಸರ್ಕಾರ ಇದಕ್ಕೆ ಇಂಬು ಕೊಡುತ್ತಿದೆ. ಈ ವ್ಯವಸ್ಥೆಯ ವಿರುದ್ಧ ನಾನು ಮತ್ತು ನನ್ನ ಪಕ್ಷದ ಸದಸ್ಯರು ಸಭಾತ್ಯಾಗ ಮಾಡುತ್ತೇವೆ.

(ಈ ಹಂತದಲ್ಲಿ ಬಿಜೆಪಿ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು)

ಗಮನ ಸೆಳೆಯುವ ಸೂಚನೆ

ಮಹಾನಗರ ಪಾಲಿಕೆಗಳ ನೌಕರರನ್ನು ವರ್ಗಾಯಿಸುವ ಬಗ್ಗೆ ನಗರಾಭಿವೃದ್ಧಿ ಸಚಿವರ ಗಮನ ಸೆಳೆಯುವುದು

ಶ್ರೀ ವಿಜಯಕುಮಾರ್ ಶೆಟ್ಟಿ (ಸುರತ್ಕಲ್) : ಮಾನ್ಯ ಅಧ್ಯಕ್ಷರೆ, ಮಹಾನಗರ ಪಾಲಿಕೆಗಳ